ತಾತ ಬಂದು ಇನ್ನೂ ಐದು ದಿನಗಳಾಗಿವೆ ಅಷ್ಟೇ. ನೋಡಿ ಅಲ್ಲಿ, ಮತ್ತೊಬ್ಬರ ಗಡುವು ಮುಗಿದಿದೆ. ಮರಳಿ ಊರಿಗೆ ಹೊರಡುತ್ತಿದ್ದಾರೆ. ಕಾಶಿಯಂಥ ಭೂಕೈಲಾಸದಲ್ಲಿ ಮುಕ್ತಿ ಸಿಗುತ್ತದೆ ಎಂಬ ಮಹಾದಾಸೆಯಲ್ಲಿ ಬರುತ್ತಾರೆ. ಮತ್ತೆ ನಿರಾಸೆಯಿಂದ ಹಿಂದಿರುಗುತ್ತಾರೆ. ನಮ್ಮದೊಂದು ತಂಗುದಾಣ ಅಷ್ಟೇ' ಎಂದರು. ತಾತನ ಆಲೋಚನೆ ಹೀಗೆಂದು ಊಹಿಸಲೂ ಅಸಾಧ್ಯವಾಯಿತು. ಕೈಕಾಲು ಇದ್ದಕ್ಕಿದ್ದಂತೆ ಸಣ್ಣಗೆ ಕಂಪಿಸಿ ಕುಸಿಯುವಂತಾಯಿತು. ರಘು ಸರ್‌ಗೆ ಸೂಕ್ಷ್ಮವಾಗಿ ಇರುವ ಸಂಗತಿ ತಿಳಿಸಿದಾಗ, ಅವರು ಇನ್ನೆರೆಡು ದಿನಗಳಲ್ಲಿ ಅಲ್ಲಿಗೇ ಬರುತ್ತೇನೆಂದರು.

ಏನೂ ತೋಚದೆ ತಾತನ ಬಳಿ ಕುಳಿತೆ. ಯಾವ ಜನ್ಮದ ಋಣವೋ ಅಮ್ಮ ಹೇಳಿದ್ದು ಸರಿಯೇ. ತಾತನ ಬ್ಯಾಗ್ ಅನ್ನು ಮತ್ತೆ ತೆಗೆದು ಅದರಲ್ಲಿದ್ದ ಆಲ್ಬಮ್ ನೋಡುತ್ತಾ ರಘು ಸರ್ ಅವರ ಬಾಲ್ಯ, ಯೌವನದ ಫೋಟೊಗಳನ್ನು , ತಾತನ ಸರ್ವಿಸ್‌ನಲ್ಲಿ ತೆಗೆದ ಆಫೀಸ್ ಫೋಟೊಗಳನ್ನು ಸನ್ಮಾನ, ಮಗನ ಮದುವೆ, ಮೊಮ್ಮಕ್ಕಳ ಚಿತ್ರಗಳನ್ನೆಲ್ಲಾ ನೋಡಿದೆ. ಇಡೀ ಕುಟುಂಬದ ಪರಿಚಯ ಆಯಿತು. ಒಬ್ಬ ವ್ಯಕ್ತಿಯ ಇಡೀ ಜೀವನ ಚರಿತ್ರೆಯನ್ನು ನೋಡಿದಂತಾಯಿತು. ಬ್ಯಾಗಿನಲ್ಲಿ ಅದರ ಕೆಳಗೆ ಇದ್ದ ಹಳೆಯ ಡೈರಿಯನ್ನು ಕೈಗೆತ್ತಿಕೊಂಡೆ. ಮತ್ತೊಬ್ಬರ ಡೈರಿ ಓದುವುದು ಸರಿಯಲ್ಲ ಎಂದು ತಿಳಿದಿತ್ತು. ಹಾಗಾಗಿ ಮತ್ತೆ ಬ್ಯಾಗಿನಲ್ಲಿಟ್ಟು ಮಲಗಿದೆ. ರಾತ್ರಿಯೆಲ್ಲಾ ತಾತನ ಬಗ್ಗೆ ಯೋಚಿಸತೊಡಗಿದೆ. ಇಂತಹ ತೀರ್ಮಾನ ತೆಗೆದುಕೊಂಡ ತಾತನ ಜೀವನದಲ್ಲಿ ಏನೆಲ್ಲಾ ನಡೆದಿರಬಹುದಲ್ಲ ಎಂದು ಊಹಿಸುತ್ತಾ ಹಾಗೇ ನಿದ್ದೆ ಹೋದೆ. ಬೆಳಿಗ್ಗೆ ಎದ್ದು ಗಂಗೆಯಲ್ಲಿ ಮಿಂದು, ವಿಶ್ವನಾಥನ ದರ್ಶನ ಪಡೆದು ಭಸ್ಮ, ಗಂಗಾಜಲ ತೆಗೆದುಕೊಂಡು ತಾತನ ಬಳಿ ಬಂದು ನೀರು ತಳಿದೆ. ತಾತ ಮಿಸುಕಲಿಲ್ಲ. ವಿಭೂತಿಯನ್ನು ಹಚ್ಚಿ 'ವಿಶ್ವನಾಥ ಎಲ್ಲಾ ನಿನ್ನ ದಯೆ' ಎಂದು ನಿಟ್ಟುಸಿರು ಬಿಟ್ಟೆ . ಮತ್ತೆ ತಾತನ ಡೈರಿಯತ್ತ ನನ್ನ ಗಮನ ಹರಿಯಿತು. ಕ್ಷಮಿಸು ತಾತ ಸುಮ್ಮನೆ ಹೀಗೇ ಕಣ್ಣಾಡಿಸೋಣ ಎಂದು ಡೈರಿಯನ್ನು ಬ್ಯಾಗಿನಿಂದ ಮತ್ತೆ ತೆಗೆದು ಹೊಸ್ತಿಲ ಜಗುಲಿಯಲ್ಲಿ ಕುಳಿತು ಪುಟಗಳನ್ನು ಹಿಂದಿನಿಂದ ಓದುವ ಅಭ್ಯಾಸದಲ್ಲಿ ತಿರುವಿಹಾಕಿದೆ. ಒಂದೈದು ವರ್ಷಗಳ ಹಿಂದಿನದ್ದು 'ಮಗನಿಗೊಂದು ಪತ್ರ' ಎಂದಿತ್ತು. ಏನೋ ಖಾಸಗಿ ವಿಷಯ ಇರಬಹುದು ಓದುವುದೋ ಬೇಡವೋ ಎಂಬ ಅನುಮಾನದಲ್ಲೇ ಕಣ್ಣಾಡಿಸಿದೆ. ತಾತ ನಿಗೂಢ ಕಥೆಗಾರನೇ ಎಂಬ ಅನುಮಾನ ಬರುವಂತೆ ಆರಂಭಿಸಿದ್ದರು. ಅದು ಹೀಗಿತ್ತು.

**'ಮಗನಿಗೊಂದು ಪತ್ರ**

ಆಕಾಶದಲ್ಲಿ ಹಾರಾಡುತ್ತಿರುವ ಗಿಡುಗಗಳನ್ನು ದಂಡೆಗಳ ಮೇಲೆ ಕುಳಿತು ನೋಡುತ್ತಿದ್ದೇನೆ. ಎಲ್ಲೋ ಬೈಬಲ್‌ನಲ್ಲಿ ಓದಿದ್ದ ನೆನಪು .

'ಸತ್ತವರು ಸತ್ತವರನ್ನು ಹೂತುಕೊಳ್ಳಲಿ, ನೀವು ನೀವಾಗಿದ್ದು ಜೀವಂತರ ಜೊತೆಯಿದ್ದು ಎತ್ತರದಲ್ಲಿ ಹಾರಾಡಿ' ಎಂದಿರಬೇಕು. ನಾನು ಸಾವನ್ನು ಹುಡುಕಿಕೊಂಡು ಹೋಗಲಿಲ್ಲ, ಆದರೆ ಅದನ್ನು ಒಪ್ಪಿಕೊಂಡು ಬಂದಿರುವೆ. ಒಬ್ಬ ರೈತ ಮಣ್ಣಿಗೆ ಮುಸುಕಿನ ಜೋಳದ ಕಾಳನ್ನು ಚೆಲ್ಲಿ ಮಾಗಿಯನ್ನು ಒಪ್ಪಿಕೊಳ್ಳುವಂತೆ; ವಸಂತ ಕಾಲಕ್ಕೆ ಹಾಗೂ ಕೊಯ್ಲಿನ ದಿನಕ್ಕೆ ಕಾಯುವಂತೆ; ಒಬ್ಬ ಮನೆ ಕಟ್ಟುವವ ದೊಡ್ಡ ಅಡಿಪಾಯ ಹಾಕುವಂತೆ; ಕಣ್ಣಿಗೆ ಅಗೋಚರವಾದ ಒಂದು ಗುಡಿಯನ್ನು ಕಟ್ಟಬೇಕಾದರೆ, ಅದರ ಅಡಿಪಾಯಕ್ಕೆ ತನ್ನನ್ನೇ ಮೂಲೆಗಲ್ಲಾಗಿಸಿಕೊಳ್ಳಬೇಕು. ಹಾಗೂ ನಮ್ಮಂತಹ ಪುಟ್ಟ ಉರುಟುಕಲ್ಲುಗಳನ್ನು ಭದ್ರಪಡಿಸಬೇಕು. ಮತ್ತೆಲ್ಲೋ ಓದಿದ್ದೆಲ್ಲವೂ ನೆನಪಾಗುತ್ತಿದೆ. ಸಾವು ಒಂದು ತೆರೆದಿರುವ ಕನ್ನಡಿ. ಭೂಮಿ ಮತ್ತು ಸೂರ್ಯನ ಮಧ್ಯೆ ಹಾರಿ ಹೋದ ಹಕ್ಕಿಯ ನೆರಳಿನಂತೆ ಹಾದು ಹೋದವ. ನಾನು ಚಿಕ್ಕವನಿದ್ದಾಗ, ಉಳುಮೆ ಮಾಡದ ಹಸಿ ಭೂಮಿ, ಗೋಡೆಗೆ ಸೇರದ ಒಂದು ಕಲ್ಲಿನಂತೆ ಇದ್ದೆ. ನನಗೀಗ ವಯಸ್ಸಾಗಿದೆ. ವರ್ಷಗಳು ನನ್ನನ್ನು ಕೆಳಗೆ ಬಾಗಿಸಿವೆ. ರೆಕ್ಕೆಗಳುಳ್ಳ ಬಿಳಿಯ ದೇವದೂತನಂತೆ ಆತ ಬರುತ್ತಾನೆ, ನನ್ನೊಳಗಿನ ಭಯಭೀತ ಕತ್ತಲನ್ನು ತನ್ನ ಅನುಗ್ರಹದಿಂದ ಮುಚ್ಚಿಬಿಡುತ್ತಾನೆ. ಇನ್ನೂ ದೂರದ ಕನಸುಗಳ ಎತ್ತರಕ್ಕೆ ಕರೆದೊಯ್ಯುತ್ತಾನೆ. ನಾನಿನ್ನೂ ಉಳುಮೆ ಮಾಡದ ಹಸಿ ಭೂಮಿಯೇ, ಕೆಳಗೆ ಬೀಳದಿರುವ ಮಾಗಿದ ಒಂದು ಹಣ್ಣು . ಈಗಲೂ ನದಿಯಲ್ಲಿ ನಾವು ಕೂಡ ಹರಿದು ಹೋಗುತ್ತೇವೆ. ಅದರೊಂದಿಗೆ ನಮ್ಮ ಹೆಸರು ಇಲ್ಲವಾಗುತ್ತದೆ. ಗಾಳಿ ಬೀಸಬಹುದು, ನಂತರ ನಿಂತುಹೋಗಬಹುದು. ಸಮುದ್ರ ಉಕ್ಕುತ್ತೆ, ನಂತರ ಶಮನವಾಗುತ್ತೆ. ಆದರೆ ಈ ಜೀವದ ಗೋಳ ಮೌನ ಮತ್ತು ಪ್ರಶಾಂತತೆ, ಅಲ್ಲಿ ಬೆಳಗುವ ತಾರೆ ಶಾಶ್ವತವಾಗಿ ಸದಾ ರಾರಾಜಿಸುತ್ತದೆ. ಒಂದು ಮಾತು ನೆನಪಿನಲ್ಲಿ ಇಟ್ಟುಕೊಳ್ಳೋಣ.